## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 1056/2024

**ಸಾಕ್ಷಿಯನ್ನು ದಿಃ 22.05.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಶಾಂತ ಲಿಂಗಯ್ಯ | ಸಿಡಬ್ಲ್ಯೂ:16 | ಪಿಡಬ್ಲ್ಯೂ: 09 |
| ತಂದೆಯ ಹೆಸರು | ಲೇಟ್ ರಾಮಲಿಂಗೇಗೌಡ | | |
| ವಯಸ್ಸು | 57 ವರ್ಷ | | |
| ಕೆಲಸ | ಪಿ ಎಸ್ ಐ ಮೈಸೂರು ದಕ್ಷಿಣ ಪೊಲೀಸ್ ಠಾಣೆ. | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ 2024 ರಿಂದ ಜೂನ್ 2024 ರವರೆಗೆ ಪಿಎಸ್ಐ ಆಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ 25.05.2024 ರಂದು ನಾನು ಠಾಣೆ ಉಸ್ತುವಾರಿಯಲ್ಲಿದ್ದಾಗ ಬೆಳಿಗ್ಗೆ 11.30 ರ ಸಮಯದಲ್ಲಿ ಚಾಸಾ -1 ರವರು ಠಾಣೆಗೆ ಹಾಜರಾಗಿದ್ದು ಗಣಕೀಕೃತ ದೂರನ್ನು ಹಾಜರುಪಡಿಸಿರುವುದನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ 127/2024 ಕಲಂ 279, 304 ಎ ಐಪಿಸಿ ರೀತ್ಯಾ ಕೇಸ್ ದಾಖಲು ಮಾಡಿ ಪ್ರ ವವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪ್ರ ವ ವ ವರದಿಯನ್ನು ನಿಪಿ-13 ಎಂದು, ಸಾಕ್ಷಿಯ

ಸಹಿಯನ್ನು ನಿಪಿ-13 ಎ ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-17 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಹೆಚ್ ಜಿ ಕೆ ವಕೀಲರಿಂದಃ**

ದೂರು ನೀಡಿದ ಚಾಸಾ-1 ರವರು ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ. ಆದರೆ ಸಹಿ ಮಾಡುತ್ತಿದ್ದರು. ದೂರನ್ನು ಎಲ್ಲಿ ಯಾರ ಬಳಿ ಟೈಪ್ ಮಾಡಿಸಿದ್ದರು ನನಗೆ ಗೊತ್ತಿಲ್ಲ. ಟೈಪ್ ಮಾಡಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ದೂರಿನಲ್ಲಿ ಪೊಲೀಸ್ ಸಹಾಯವಾಣಿ 112 ಗೆ ಕರೆ ಮಾಡಿ ವಿಷಯ ತಿಳಿಸಿದ್ದು ಎಂದು ಹೇಳಿದ್ದು ಆ ಬಗ್ಗೆ ಠಾಣೆಯಲ್ಲಿ ಪರಿಶೀಲಿಸಿಲ್ಲ. ದೂರು ದಾಖಲಿಸುವ ಪೂರ್ವದಲ್ಲಿ 112 ಸಿಬ್ಬಂದಿಯವರು ಸ್ಥಳಕ್ಕೆ ಹೋಗಿದ್ದರು. ಯಾವ ಸಿಬ್ಬಂದಿಯವರು ಹೋಗಿದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದೂರಿನಲ್ಲಿರುವ ಅಂಶಗಳ ಬಗ್ಗೆ ಚಾಸಾ-1 ರವರನ್ನು ಕೇಳಿ ತಿಳಿದು ಕೊಂಡಿರುತ್ತೇನೆ. ದೂರು ನೀಡಿದ 14 ಗಂಟೆಗಳು ತಡವಾಗಿದ್ದಕ್ಕೆ ಕಾರಣವನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಆ ಬಗ್ಗೆ ಎಫ್ ಐ ಆರ್ ನಲ್ಲಿ ದಾಖಲು ಮಾಡಿಲ್ಲ. ದೂರನ್ನು ಕೊಟ್ಟ ನಂತರ ಸತ್ಯ ಅಸತ್ಯತೆಯನ್ನು ಪರಿಶೀಲಿಸದೇ ಕೇಸ್ ರಿಜಿಸ್ಟರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಅನುಕೂಲವಾಗಲೆಂದು ಆರೋಪಿಯ ಮೇಲೆ ಸುಳ್ಳು ಕೇಸ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.